ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಚಿಕ್ಕಮಗಳೂರು.
ಸಿ.ಸಿ. 17/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಕುಮಾರ್ ಎಂಇ | ಪಿ.ಡಬ್ಲ್ಯೂ.5 |
| ತಂದೆಯ ಹೆಸರು | : | ಈಶ್ವರಪ್ಪ | ಸಿ.ಡಬ್ಲ್ಯೂ.6 |
| ವಯಸ್ಸು | : | 37 ವರ್ಷ | |
| ವೃತ್ತಿ | : | ಸಿ.ಪಿ.ಸಿ 100 ಬಸವನಹಳ್ಳಿ ಪೋಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 15-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ದಿಃ 26.06.2020 ರಿಂದ ದಿಃ 14.08.2025 ರವರೆಗೆ ಚಿಕ್ಕಮಗಳೂರು ಸಿಇಎನ್ ಪೊಲೀಸ್ ಠಾಣೆಯಲ್ಲಿ ಪಿಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.07.2022 ರಂದು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಎಂಐ ಮೊಬೈಲ್ ನ್ನು extract ಮಾಡಿ Forensic Imaging Report ನ್ನು ತೆಗೆದು ಚಾಸಾ 8 ರವರಿಗೆ ನೀಡಿರುತ್ತೇನೆ. ಚಾಸಾ 8 ರವರು ಮಹಜರ್ ಕಾಲಕ್ಕೆ ತೆಗೆಸಿದ ಫೋಟೋಗಳನ್ನು ಸಿ.ಡಿ. ಗೆ ವರ್ಗಾವಣೆ ಮಾಡಿ, 65(ಬಿ) ಸರ್ಟಿಫಿಕೇಟ್ ನ್ನು ನೀಡಿರುತ್ತೇನೆ. ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ 5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಸಿ.ಡಿ.ಯನ್ನು ನೋಡುತ್ತಿದ್ದು ಅದನ್ನು ನಿಪಿ 13 ಎಂದು ಹಾಗೂ 65(ಬಿ) ಸರ್ಟಿಫಿಕೇಟ್ ನ್ನು ನ್ನು ನಿಪಿ 14 ಎಂದು ಹಾಗೂ ನನ್ನ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಎಂಐ ಕಂಪನಿಯ ಮೊಬೈಲ್ ನ್ನು ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಎಂಓ 1 ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ತನಿಖಾಧಿಕಾರಿಯವರು ನೀಡಿದ ಮೊಬೈಲ್ ನ Extract ನ್ನು ನಾನು ತೆಗೆದಿರುತ್ತೇನೆ ಎಂದರೆ ಸರಿ. ನಾನು ಅಮಾನತ್ ಮಹಜರ್ ನಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಸರಿ.

ಯಾರು ಎಂಒ 1 ಮೊಬೈಲ್ ನ್ನು ಯಾರಿಗೆ ನೀಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಪಿ 5 ರಿಂದ 7 ಮೊಬೈಲ್ ನ್ನು ಅಮಾನತ್ ಪಡಿಸಿಕೊಂಡ ತೆಗೆದ ಪೋಟೋಗಳಾಗಿದ್ದು, ಮೊಬೈಲ್ ನಿಂದ extract ತೆಗೆದಾಗ ತೆಗೆದ ಪೋಟೋ ಅಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋದಲ್ಲಿ extract ನ್ನು ತೆಗೆದ ಬಗ್ಗೆ ಕಾಣಿಸುವುದಿಲ್ಲ ಎಂದರೆ ಸಾಕ್ಷಿದಾರರು extract ನ್ನು ತೆಗೆಯುವ ಪ್ರಾರಂಭದಲ್ಲಿ ಸದರಿ ಪೋಟೋವನ್ನು ತೆಗೆಯಲಾಗಿತ್ತು ಎಂದು ನುಡಿಯುತ್ತಾರೆ. ನಾನು ನೀಡಿದ 65(ಬಿ) ಸರ್ಟಿಫಿಕೇಟ್ ನಲ್ಲಿ ಇರಬೇಕಾಗಿರುವ ಎಲ್ಲಾ ಮಾಹಿತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಿಂದ 7 ರಲ್ಲಿ ಪಂಚರ ಸಹಿಗಳು ಕಂಡುಬರುವುದಿಲ್ಲ ಎಂದರೆ ಸರಿ. ಸದರಿ ಪೋಟೋಗಳನ್ನು ತೆಗೆದ ದಿನಾಂಕವು ಸದರಿ ಪೋಟೋಗಳಲ್ಲಿ ಪ್ರಿಂಟ್ ಆಗಿಲ್ಲ ಎಂದರೆ ಸರಿ. ಆದ್ದರಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ನಾನು ಹೇಳಿದ ದಿನಾಂಕದಂದು ಮೊಬೈಲ್ ನಿಂದ extract ನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ